**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 246/2017 ಸಿಡಬ್ಲ್ಯೂ ಃ 1**

**ಪಿಡಬ್ಲ್ಯೂ ಃ 3**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ವಿಶ್ವನಾಥ** |
| **ತಂದೆಯ ಹೆಸರು** | ಃ | **ಕಲ್ಯಾಣಪ್ಪ ಹಿರೇಗೌಡರ** |
| **ವಯಸ್ಸು** | ಃ | **45 ವರ್ಷ** |
| **ಉದ್ಯೋಗ** | ಃ | **ಸಿಪಿಐ, ಕುಷ್ಟಗಿ ವೃತ್ತ** |
| **ವಾಸ** | ಃ | **ಕುಷ್ಟಗಿ** |

**ದಿನಾಂಕಃ 14.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು ದಿನಾಂಕಃ 07.01.2017 ರಿಂದ ದಿನಾಂಕಃ 19.08.2019 ರವರೆಗೆ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 09.02.2017 ರಂದು ನಾನು ರಾತ್ರಿ ಗಸ್ತು ಕರ್ತವ್ಯಕ್ಕೆ ನನ್ನ ಜೀಪ್ ಚಾಲಕ ಚಾಸಾ 6 ರವರೊಂದಿಗೆ ರಾತ್ರಿ 10.30 ಗಂಟೆಯಿಂದ ಪ್ರಾರಂಭಿಸಿ ರಾತ್ರಿ ಗಸ್ಸು ಕರ್ತವ್ಯದಲ್ಲಿ ಇದ್ದಾಗ ದಿನಾಂಕ 10.02.2017 ರಂದು ಬೆಳಿಗ್ಗೆ 04.00 ಗಂಟೆಗೆ ಗುಡ್ ಮಾರ್ನಿಂಗ್ ಬೀಟ್ ಸಿಬ್ಬಂದಿಗಳಾದ ಚಾಸಾ 4 ಮತ್ತು 5 ರವರೊಂದಿಗೆ ನನ್ನ ಜೀಪನಲ್ಲಿ ಕೂಡಿಸಿಕೊಂಡು ಗಜೆಂದ್ರಗಡ ರಸ್ತೆಯಲ್ಲಿರುವ ಕನಕದಾಸ ಸರ್ಕಲ ಹತ್ತಿರ ಬಂದಾಗ ಅಲ್ಲಿ ಎಸ್ ಬಿ ಐ ಬ್ಯಾಂಕ್ ಮುಂದುಗಡೆ 3 ಜನ ವ್ಯಕ್ತಿಗಳು ಒಂದು ಮೊ.ಸೈ. ನಿಲ್ಲಿಸಿಕೊಂಡು ತಮ್ಮ ಇರುವಿಕೆಯನ್ನು ಮರೆಮಾಚಿಕೊಳ್ಳುತ್ತಿದ್ದರಿಂದ ನಾವು ಅವರಲ್ಲಿಗೆ ಹೋಗಿ ವಿಚಾರಿಸಿದಾಗ ಅವರ ಬಳಿ 2 ಅಡಿ ಉದ್ದದ ಒಂದು ರಾಡು, ಒಂದು ಪ್ಲಾಸ್ಟಿಕ್‌ನಲ್ಲಿ ಖಾರದ ಪುಡಿ ಇಟ್ಟುಕೊಂಡಿರುವುದು ಕಂಡುಬಂದಿರುತ್ತದೆ. ಹಾಗೂ ಅವರ

ಬಳಿ ಇರುವ ವಾಹನವನ್ನು ನೋಡಲಾಗಿ ಅದಕ್ಕೆ ಯಾವುದೇ ನಂಬರ ಪ್ಲೇಟ್ ಇಲ್ಲದ್ದರಿಂದ ಅವರ ಮೇಲೆ ಅನುಮಾನ ಬಂದು ವಿಚಾರಿಸಲಾಗಿ ಅವರ ಹೆಸರು ಕೂಡ ಅವರು ತಪ್ಪು ತಪ್ಪು ಹೇಳುತ್ತಿದ್ದರು. ಅವರನ್ನು ಕೂಲಂಕುಷವಾಗಿ ವಿಚಾರ ಮಾಡಿದಾಗ ಒಬ್ಬನು ತನ್ನ ಹೆಸರನ್ನು ಈರಪ್ಪ ಬಾಳಪ್ಪ ತಾಳಿಕೋಟಿ ಸಾಃ ಗದಗ, ಇನ್ನೊಬ್ಬನು ತನ್ನ ಹೆಸರು ದುರಗಪ್ಪ ತಂದೆ ಗಂಗಪ್ಪ ಕುಂಚಿಕೊರವರ ಸಾಃ ಯಲಬುರ್ಗಾ, ಹಾಗೂ ಇನ್ನೊಬ್ಬ ಫಕೀರಪ್ಪ ತಂದೆ ಭೀಮಪ್ಪ ತಾಳಿಕೋಟಿ ಸಾಃ ಗದಗ ಎಂದು ತಿಳಿಸಿರುತ್ತಾರೆ. ಅವರಲ್ಲಿರುವ ಅನುಮಾನಾಸ್ಪದ ವಸ್ತುಗಳ ಬಗ್ಗೆ ವಿಚಾರಿಸಲಾಗಿ ಸರಿಯಾದ ಉತ್ತರ ನೀಡದ್ದರಿಂದ ಅವರನ್ನು ಹಾಗೇ ಬಿಟ್ಟಲ್ಲಿ ಸಜ್ಞೆ ಅಪರಾಧ ಮಾಡಬಹುದು ಎಂದು ತಿಳಿದು ಆರೋಪಿತರನ್ನು ಹಾಗೂ ಅವರಿಂದ ಸಿಕ್ಕ ಮಾಲನ್ನು ಠಾಣೆಗೆ ಕರೆತಂದು ಅವರ ವಿರುದ್ಧ ಸರ್ಕಾರಿ ತರಪೆ ದೂರು ನೀಡಿರುತ್ತೇನೆ. ತನಿಖಾಧಿಕಾರಿಗಳು ಗುನ್ನಾ ಜಾಗ ಪಂಚನಾಮೆ ಮಾಡುವ ಕಾಲಕ್ಕೆ ಗುನ್ನೆ ಜಾಗ ತೋರಿಸಿರುತ್ತೇನೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 3 ಎಂದು, ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ. 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿತರ ಪರ ಶ್ರೀ ಬಿ ಡಿ ಎ ವಕೀಲರಿಂದಃ**

4. ನಾನು ಕುಷ್ಟಗಿ ನಗರದ ಎನ್ ಹೆಚ್ ರಸ್ತೆ, ಬಸ್ಸ ನಿಲ್ದಾಣ, ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಗಸ್ತು ಮಾಡಿರುತ್ತೇನೆ. ಬಸ್ಸ ಸ್ಟ್ಯಾಂಡಿಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನಿಖರವಾಗಿ ನೆನಪು ಇಲ್ಲ. ಚಾಸಾ 4 ಮತ್ತು 5 ಮೊದಲ ಬಾರಿಗೆ 04.00 ಗಂಟೆಗೆ ಬಸವೇಶ್ವರ ಸರ್ಕಲನಲ್ಲಿ ಭೇಟಿ ಆಗಿರುತ್ತಾರೆ. 5 ರಿಂದ 6 ನಿಮಿಷ ಆ ಸರ್ಕಲನಲ್ಲಿ ಇದ್ದೇವು. ಆ ಸರ್ಕಲ ಬಿಟ್ಟ ನಂತರ ಸಿಟಿ ರೌಂಡ್ಸ ಹಾಕುತ್ತಾ ಹೋಗಿರುತ್ತೇವೆ. ಆದರೆ ನಿಖರವಾಗಿ ಯಾವ ಯಾವ ಸ್ಥಳಕ್ಕೆ ಹೋಗಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಚಾಸಾ 4 ಮತ್ತು 5 ರವರ ಜೊತೆಯು ಸಹ ನಾನು ಬಸ್ಸ ನಿಲ್ದಾಣಕ್ಕೆ ಹೋಗಿ ಬಂದಿರುತ್ತೇನೆ. 04.15 ರಿಂದ 04.20 ನಿಮಿಷದಲ್ಲಿ

ಹೋಗಿರುತ್ತೇನೆ. ಕನಕದಾಸ ಸರ್ಕಲಗೆ ಹೋಗಲು ಎಸ್ ಬಿ ಐ ಬ್ಯಾಂಕನ ಮುಂದೆ ಹಾದು ಹೋಗಬೇಕು. ಎಸ್ ಬಿ ಎಮ್ ಬ್ಯಾಂಕ್ ಹತ್ತಿರ ಸಾಕಷ್ಟು ಬಯಲು ಜಾಗ ಇದೆ ಎಂದರೆ ರಸ್ತೆ ಇದೆ ಎಂದು ನುಡಿಯುತ್ತಾರೆ.

5. 04.30 ಗಂಟೆ ಸುಮಾರಿಗೆ ಸಾಕಷ್ಟು ಜನ ವಾಕಿಂಗ್ ಹೋಗುತ್ತಾರೆ ಎಂದರೆ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ಎಸ್ ಬಿ ಎಮ್ ಬ್ಯಾಂಕ್ ಹತ್ತಿರ ಹೋದಾಗ ಆರೋಪಿತರು ಬ್ಯಾಂಕ ಮುಂದೆ ಗಜೇಂದ್ರಗಡ ಹೋಗುವ ರಸ್ತೆಯಲ್ಲಿ ನಿಂತಿದ್ದರು. ಆರೋಪಿತರು ಜೊತೆಯಲ್ಲಿಯೇ ಇದ್ದರು. ಬ್ಯಾಂಕ್ ಮೇಲೆ ಇದ್ದು, ಕೆಳಗಡೆ ಹೊಟೇಲ್ ಮತ್ತು ಕಿರಾಣಿ ಅಂಗಡಿ ಇದ್ದು, ಆ ಭಾಗದಲ್ಲಿ ಆರೋಪಿತರು ಅಡಗಿಕೊಳ್ಳುತ್ತಿದ್ದರು. ಹೊಟೇಲ್ ಅಂಗಡಿ ಬಂದ್ ಇದ್ದವು. ನಾವು ಅರ್ಧ ಗಂಟೆಯ ಮೇಲೆ ಸ್ಥಳದಲ್ಲಿ ಇದ್ದೇವು. ನಮ್ಮ ಠಾಣೆ ಮತ್ತು ಎಸ್ ಬಿ ಎಮ್ ಬ್ಯಾಂಕ್ 1 ಕಿ.ಮೀ. ಅಂತರ ಇದೆ. ಠಾಣೆಗೆ ಅಲ್ಲಿಗೆ ಹೋಗಲು 5 ರಿಂದ 10 ನಿಮಿಷ ಬೇಕು. ನಾವು ಠಾಣೆಗೆ ನೇರವಾಗಿ ಹೋಗಿರುತ್ತೇವೆ. ಠಾಣೆಗೆ ಬಂದಾಗ 05.30 ಗಂಟೆ ಆಗಿತ್ತು.

6. ಆರೋಪಿತರನ್ನು ನಾನೇ ಹಿಡಿದು ನಾನೇ ವಿಚಾರಣೆ ಮಾಡಿರುತ್ತೇನೆ. ಮು.ಮಾ. 1 ರಂತಹ ವಸ್ತು ಕಬ್ಬಿಣದ ಅಂಗಡಿಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ಸರಿ. 1 ನೇ ಆರೋಪಿಯ ಕೈಯಲ್ಲಿ ಮು.ಮಾ. 1 ಮತ್ತು 2 ಇದ್ದವು. ದೂರು ನೀಡುವಾಗ ಅದನ್ನು ಹೇಳಿ ಬರೆಸಿಲ್ಲ. ಸದರಿ ದಿನ ನಾವು ಗಸ್ತು ಮಾಡುವಾಗ ಆರೋಪಿತರು ಎಸ್ ಬಿ ಎಮ್ ಬ್ಯಾಂಕ್ ಮುಂದೆ ಮು.ಮಾ. 1 ಮತ್ತು 2 ನ್ನು ಹಿಡಿದುಕೊಂಡು ಅನುಮಾನಾಸ್ಪದವಾಗಿ ಅಡಗಿಕೊಳ್ಳುತ್ತಿದ್ದರು ಹಾಗೂ ನಾನು ಅವರನ್ನು ಹಿಡಿದು ವಿಚಾರಣೆ ಮಾಡಿ ಮು.ಮಾ. ಗಳನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು.ಮಾ.ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ. 1 ಮತ್ತು 2 ಅನ್ನು 1 ನೇ ಆರೋಪಿಯಿಂದ ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊ.ಸೈ. ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು,

ನಮ್ಮ ಸಿಬ್ಬಂದಿಯವರ ಜೊತೆ ಸೇರಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರೂ ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ ಆರೋಪಿ ಪರ ಶ್ರೀ ಸಿ ಪಿ ಪಿ ವಕೀಲರು ಸದರಿ ಪಾಟೀಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**